ದಿ.02.06.2026 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಪ್ರತಿವಾದಿ ಪರ ಶ್ರೀ ಎಸ್.ಕೆ ವಕೀಲರಿಂದ.**

ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದು, ಅದರಲ್ಲಿರುವ ಸಂಗತಿಗಳೆಲ್ಲಾ ಸತ್ಯವಿದ್ದು, ಅದನ್ನು ನಾನೇ ಹೇಳಿ ಬರೆಸಿದ್ದೇನೆ ಹಾಗೂ ಪ್ರಮಾಣ ಪತ್ರಕ್ಕೆ ನಾನೇ ಸಹಿ ಮಾಡಿರುತ್ತೇನೆ.

ನಿಡಿ-32 ಶುದ್ಧ ಕ್ರಯಪತ್ರದಂತೆ ನಾನು 02 ಗುಂಟೆ ಜಮೀನನ್ನು ಮೈದೊಳಲು ಗ್ರಾಮದ ಸರ್ವೆ ನಂ. 79/02 ರಲ್ಲಿ ಖರೀದಿ ಮಾಡಿರುತ್ತೇನೆ. ಸದರಿ ಕ್ರಯ ಪತ್ರದಲ್ಲಿ ನನ್ನ ಸಹಿ ಇರುತ್ತದೆ.

**ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.)
ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

*(ರಾಘವೇಂದ್ರ. ಡಿ.)*
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಭದ್ರಾವತಿ

ದಿ.17.06.2026 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ ಎನ್.ಎಲ್.ಹೆಚ್ ವಕೀಲರಿಂದ.**

1. ನಾನು ಮುಂಚ್ಚಿನಿಂದಲೂ ಮೈದೊಳಲು ಗ್ರಾಮದಲ್ಲಿ ವಾಸವಾಗಿರುತ್ತೇನೆ. ವಾದಿಗಳು ಮತ್ತು ಅವರ ಅಣ್ಣ ತಮ್ಮಂದಿರು ನನಗೆ ಪರಿಚಯವಿರುತ್ತಾರೆ. ಮೈದೊಳಲು ಗ್ರಾಮದಲ್ಲಿ ವ್ಯವಸಾಯ ಮಾಡುತ್ತಿರುವ ಜಮೀನುಗಳು ಎಲ್ಲಾ ಸರ್ವೆ ನಂಬರ್ ಗಳು ನನಗೆ ಗೊತ್ತಿರುವುದಿಲ್ಲ. ಸರ್ವೆ ನಂ. 93 ಸುಮಾರು 15 ಎಕರೆ ವಿಸ್ತೀರ್ಣವಿರುತ್ತದೆ. ನನ್ನ ಮುಖ್ಯವಿಚಾರಣೆಯಲ್ಲಿ ಸರ್ವೆ ನಂ. 93/2 ರಲ್ಲಿ ನಮ್ಮ ಸ್ವತ್ತಿನ ಪಶ್ಚಿಮ ಭಾಗಕ್ಕೆ ಪ್ರತಿವಾದಿ ರಾಜರಾವ್ ರವರ ಜಮೀನು ಬರುತ್ತದೆ ಎಂದು ಹೇಳಿರುತ್ತೇನೆ ಎಂದರೆ ಸರಿ ಸದರಿ ಜಮೀನು ಪ್ರತಿವಾದಿಗಳ ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ. ಸರ್ವೆ ನಂ.79/2 ರಲ್ಲಿ ನನಗೆ ಸೇರಿದ 02 ಗುಂಟೆ ಜಮೀನು ಮತ್ತು ಅಂಬುಜಾರವರಿಗೆ ಸೇರಿದ 02 ಗುಂಟೆ ಜಮೀನು ಇರುತ್ತದೆ. ನಾನು ಪ್ರತಿವಾದಿಗಳು ಅವರ ಪಹಣಿಯ ಆಧಾರದ ಮೇಲೆ ಸ್ವಾಧೀನದಲ್ಲಿರುತ್ತಾರೆಂದು ಹೇಳಿರುತ್ತೇನೆ ಎಂದರೆ ಸಾಕ್ಷಿಯು ಅವರು ನಮ್ಮ ಜಮೀನಿನ ಪಕ್ಕದಲ್ಲಿ ಸಾಗುವಳಿ ಮಾಡುತ್ತಿರುತ್ತಾರೆ ಆಗಾಗಿ ಪ್ರತಿವಾದಿಗಳು ಸ್ವಾಧೀನದಲ್ಲಿರುತ್ತಾರೆಂದು ಹೇಳಿರುತ್ತೇನೆ. ಪ್ರತಿವಾದಿಗಳ ಜಮೀನಿನ ಪಶ್ಚಿಮಕ್ಕೆ ಕರಿಬಸಪ್ಪ ಬಿನ್ ಹನುಮಂತರಾವ್ ರವರ ಜಮೀನು ಇರುತ್ತದೆ ಆದಾದ ನಂತರ ವಾದಿ ನಾಗರಾಜ್ ರವರ ಜಮೀನು ಇರುತ್ತದೆ. ಕರಿಬಸಪ್ಪನವರು ಸ್ವಾಧೀನದಲ್ಲಿರುವ ಜಮೀನನ್ನು

ವಾದಿ ನಾಗರಾಜ್ ರವರು ಮಾರಾಟ ಮಾಡಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ. ವಾದಿ ನಾಗರಾಜ್ ರವರ ಜಮೀನು ಸರ್ವೆ ನಂ. 93 ರಲ್ಲಿ ಬರುತ್ತದೆ ಆದರೆ ಅದರ ಸಬ್ ನಂಬರ್ ನನಗೆ ಗೊತ್ತಿರುವುದಿಲ್ಲ. ವಾದಿಯ ತಂದೆಯ ಹೆಸರು ಅಣ್ಣಪ್ಪ ಅಲಿಯಾಸ್ ಅಣ್ಣೋಜೀರಾವ್. ಅಣ್ಣೋಜೀರಾವ್ ರವರ ತಂದೆಯ ಹೆಸರು ನನಗೆ ಗೊತ್ತಿರುವುದಿಲ್ಲ.

2. ನಮ್ಮ ಮೈದೊಳಲು ಗ್ರಾಮದಲ್ಲಿ ಈರಪ್ಪ ಬಿನ್ ಬಸಪ್ಪ ಎಂಬ ವ್ಯಕ್ತಿ ಯಾರು ಇರುವುದಿಲ್ಲ. ಈರಪ್ಪ ಬಿನ್ ಏಸಪ್ಪ ಎನ್ನುವವರು ನಾನು ನಮ್ಮ ಊರಿನಲ್ಲಿ ನೋಡಿರುವುದಿಲ್ಲ. ಈರಪ್ಪ ಬಿನ್ ಏಸಪ್ಪರವರ ವಾರಸುದಾರರು ನಮ್ಮ ಊರಿನಲ್ಲಿ ಯಾರು ಇರುವುದಿಲ್ಲ. ಈರಪ್ಪ ಬಿನ್ ಏಸಪ್ಪ ರವರು ನಮ್ಮ ಊರಿನಲ್ಲಿ ಎಲ್ಲಿ ವಾಸ ಮಾಡುತ್ತಿದ್ದರು ಮತ್ತು ಅವರ ಮನೆಯನ್ನು ನಾನು ನೋಡಿರುವುದಿಲ್ಲ. ಈರಪ್ಪ ಬಿನ್ ಏಸಪ್ಪನವರು ನಮ್ಮ ಊರಿನಲ್ಲಿ ಇದ್ದರು ಎಂದು ನಮ್ಮ ಊರಿನ ಹಿರಿಯನ್ನು ನಾನು ಕೇಳಿ ತಿಳಿದುಕೊಳ್ಳುವ ಪ್ರಯತ್ನ ಪಟ್ಟಿರುವುದಿಲ್ಲ. ಈರಪ್ಪ ಬಿನ್ ಏಸಪ್ಪನವರು ವಾದಿಗಳ ಕುಟುಂಬಕ್ಕೆ ಸೇರಿದವರಲ್ಲ ಎಂದರೆ ಸರಿ.

3. ಅಣ್ಣೋಜೀರಾವ್ ರವರಿಗೆ ಎಷ್ಟು ಜನ ಅಣ್ಣತಮ್ಮಂದಿರು ಇದ್ದರು ಎಂದು ನನಗೆ ಗೊತ್ತಿರುವುದಿಲ್ಲ. ಸರ್ವೆ ನಂ. 93 ರ ಮೂಲ ಮಾಲೀಕರ್ಯಾರೆಂದು ನನಗೆ ಗೊತ್ತಿರುವುದಿಲ್ಲ. ಸರ್ವೆ ನಂ. 93 ಯಾವಾಗ ಸರ್ವೆ ನಂ. 93/1 ಮತ್ತು ಸರ್ವೆ ನಂ. 93/2 ಎಂದು ಯಾವಾಗ ಆಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ನಾನು ಈ ದಿವಸ ಪ್ರತಿವಾದಿಯ ಜೊತೆಯಲ್ಲಿ ನ್ಯಾಯಾಲಯಕ್ಕೆ ಬಂದಿರುತ್ತೇನೆ ಎಂದರೆ ಸರಿ. ಪ್ರತಿವಾದಿಗೆ ಸರ್ವೆ ನಂ.93/2 ರಲ್ಲಿರುವ ಜಮೀನನ್ನು ಬಿಟ್ಟು ಇನ್ನು ಸುಮಾರು 02 ಎಕರೆ ಜಮೀನು ಬೇರೆ ಸರ್ವೆ ನಂಬರ್ ನಲ್ಲಿರುತ್ತದೆ ಅದರ ಸರ್ವೆ ನಂಬರ್ ನನಗೆ ಗೊತ್ತಿರುವುದಿಲ್ಲ.

4. ಅಣ್ಣಪ್ಪನ ಮಗ ಯಲ್ಲಪ್ಪ ಪ್ರತಿವಾದಿ ರಾಜಾರಾವ್ ರವರ ಮನೆಯಲ್ಲಿ ಸಂಬಳದ ಆಳಾಗಿ 05 ವರ್ಷ ಕೆಲಸ ಮಾಡಿರುತ್ತಾರೆ. ಯಲ್ಲಪ್ಪನವರು 1990 ರಿಂದ 1995 ರವರೆಗೆ ರಾಜಾರಾವ್ ರವರ ಮನೆಯಲ್ಲಿ ಕೆಲಸ ಮಾಡುತ್ತಿದ್ದರು. ಯಲ್ಲಪ್ಪನವರಿಗೆ ಹನುಮಂತಪ್ಪ ಎಂಬ ತಮ್ಮ ಇರುತ್ತಾರೆ. ಯಲ್ಲಪ್ಪನವರಿಗೆ ಲಕ್ಷ್ಮಣಪ್ಪ ಎನ್ನುವ ತಮ್ಮ ಇರುತ್ತಾರೆಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಸರ್ವೆ ನಂ. 93 ರಲ್ಲಿ 05 ಎಕರೆ 03 ಗುಂಟೆ ಜಮೀನನ್ನು ಯಲ್ಲಪ್ಪ ಮತ್ತು ಅವರ ತಮ್ಮ ಲಕ್ಷ್ಮೋಜೀರಾವ್ ರವರು 1971 ಕ್ಕಿಂತ ಹಿಂದೆ ರಾಜಾರಾವ್ ಮತ್ತು ಅವರ ತಂದೆ ದೊಡ್ಡ ರಾಮಚಂದ್ರರಾವ್ ರವರಿಗೆ ರಾಗಿ ಗುತ್ತಿಗೆಗೆ ಕೊಟ್ಟಿದ್ದರು ಎಂದರೆ ಸರಿಯಲ್ಲ. 1971 ರಲ್ಲಿ ರಾಗಿ ಗುತ್ತಿಗೆ ಸರಿಯಾಗಿ ಕೊಟ್ಟಿಲ್ಲವೆಂದು ಹೇಳಿ ನಮ್ಮ ಊರಿನಲ್ಲಿ ಪಂಚಾಯ್ತಿಯಾಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ನಮ್ಮ ಗ್ರಾಮದಲ್ಲಿ 1971 ರಲ್ಲಿ ಪಂಚಾಯ್ತಿಯಾಗಿ ರಾಜಾರಾವ್ ರವರಿಂದ ಯಲ್ಲಪ್ಪ ಮತ್ತು ಲಕ್ಷ್ಮೋಜೀರಾವ್ ರವರಿಗೆ ಜಮೀನನ್ನು ಬಿಡಿಸಿಕೊಟ್ಟಿರುವ ವಿಚಾರ ನನಗೆ ಗೊತ್ತಿದ್ದರೂ ಸಹ ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1971 ರಲ್ಲಿ ಗ್ರಾಮದಲ್ಲಿ ಆದ ಪಂಚಾಯ್ತಿಯಲ್ಲಿ ಬರವಣಿಗೆಯಾದ ವಿಚಾರ ನನಗೆ ಗೊತ್ತಿರುತ್ತದೆ ಎಂದರೆ ಸರಿಯಲ್ಲ. ರಾಜಾರಾವ್ ರವರಿಗೆ ಜಮೀನು ಪಿತ್ರಾರ್ಜಿತವಾಗಿ ಬಂದಿರುತ್ತದೆ. ನನಗೆ ದಾವಾಸ್ವತ್ತಿನ ಬಗ್ಗೆ ಯಾವುದೇ ವಿಚಾರ

ಗೊತ್ತಿಲ್ಲದೆ ಇದ್ದರೂ ಸಹ ವಾದಿಯ ಮಾತು ಕೇಳಿ ಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ. ದಾವಾಸ್ವತ್ತಿನಲ್ಲಿ ಈಗಲೂ ವಾದಿಗಳು ಸಾಗುವಳಿ ಮಾಡಿ ಸ್ವಾಧೀನ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿರುತ್ತಾರೆಂದರೆ ಸರಿಯಲ್ಲ. ವಾದಿಗಳು ಈಗ ದಾವಾಸ್ವತ್ತಿನಲ್ಲಿ ಸಾಗುವಳಿ ಮಾಡುತ್ತಿದ್ದರೂ ಸಹ ಪ್ರತಿವಾದಿಗಳು ನಮ್ಮ ಪಕ್ಕದ ಜಮೀನಿನಲ್ಲಿ ಸಾಗುವಳಿ ಮಾಡುತ್ತಿದ್ದಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 04 ನೇ ವಾದಿ ಪೊಲೀಸರಿಗೆ ಪ್ರತಿವಾದಿಗಳ ವಿರುದ್ಧ ದೂರು ಕೊಟ್ಟಿರುತ್ತಾರೆ ಎಂದರೆ ಸರಿ. ದಾವಾಸ್ವತ್ತಿನಲ್ಲಿ ವಾದಿ ಕುಟುಂಬದವರೇ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

*(ರಾಘವೇಂದ್ರ. ಡಿ.)*
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಭದ್ರಾವತಿ